ನೊಗ ಹೊತ್ತ ಎತ್ತುಗಳ ರೀತಿಯಲ್ಲಿ ಮನೆಯ ದುಡಿಮೆ. ದನ ಕರುಗಳ ದಟ್ಟ ರೈತಾಪಿ. ನಸುಕಿನಲ್ಲಿ ಎದ್ದು ಇಪ್ಪತ್ತು ಮುವತ್ತು ರೊಟ್ಟಿ ಬಡೆದು ಒಗೆದು, ಪಲ್ಯ ಮಾಡಿ, ಅನ್ನ ಬಸಿದು, ದೊಡ್ಡ ಗುಂಡೆಯಲ್ಲಿ ಕಡೆಗೋಲಿನಿಂದ ಮಜ್ಜಿಗೆ ಮಾಡುವಷ್ಟರ ಹೊತ್ತಿಗೆ ಉಸ್ಸಪ್ಪಂತ ಸುಸ್ತು. ಅದಲ್ಲದೆ ಬಿಸಿಲೊಳಗೆ ಒಮ್ಮೊಮ್ಮೆ ಆಳುಗಳ ಮೇಲೆ ದೇಖರೇಕಿ ಮಾಡಲು ಸರಿತಕ್ಕ ಹೊಲಕ್ಕೆ ಹೋಗುತ್ತಿದ್ದಳು. ಈ ದನ ದುಡಿದಂಗೆ ದುಡಿವ ದುಡಿಮೆಗಿಂತ ಪುರುಷ ಪುಂಗವರ ಯಜಮಾನಿಕೆಗೆ ಬೇಸತ್ತಿದ್ದಳು.

'ನನ್ನ ಮಗಳನ್ನ ನೌಕರಿ ಮಾಡಾಂವಗನ ಕೊಡತೀನಿ... ಈ ವ್ಯಾಪಾರ ಗೀಪಾರ ಮಾಡಾವರಂದರ ವಾಕರಿಕಿ ಬಂದಂಗ ಆಗೇತಿ... ಬರೇ ರೊಕ್ಕ ರೊಕ್ಕಂತ ಅದರ ಹಿಂದನ ಬಿದ್ದಾವು... ಒಂದ ಛಂದಾನ ಮಾತಿಲ್ಲ ಕತಿಯಿಲ್ಲ... ಛಲೋ ಕೆಟ್ಟ ತಿಳಕೋದಿಲ್ಲ... ಕಡೆಪಕ್ಷ ಮನದುಂಬಿ ನಗೋದ ಹಾರಗೆಡವರಿ... ಮುಗುಳು ನಗುವಿಲ್ಲ... ಯಾನ ಮಾಡತೇರಿ ಇಂಥ ಜಲ್ಮಾ ತಗೊಂಡ...!' ಹೀಗೆಂದು ಸರಿತಕ್ಕ ಮನದಿಚ್ಛೆ ವ್ಯಕ್ತಪಡಿಸಿದ್ದಳು.

ರೂಪಾಳ ಸಂಗಡ ಕೊನೆಯ ಭೇಟಿಯ ಪ್ರಸಂಗ. ಅದು ಬಸೂನ ಮನದೊಳಗೆ ತಣ್ಣಗೆ ಹಾಸಿ ಹೊದ್ದು ಮಲಗಿದೆ. ಧಾರವಾಡಕ್ಕೆ ಹೋಗುವ ಮುಂಚೆಯ ಘಟನೆ. ಬಸೂ ಮತ್ತು ಅವನಕ್ಕ ಅವಳನ್ನು ಬೀಳ್ಕೊಡಲು ನಿಪ್ಪಾಣಿ ತನಕ ಬಸ್‌ನೊಳಗೆ ಹೋಗಿದ್ದರು. ರಸ್ತೆಗೆ ದೊಡ್ಡ ದೊಡ್ಡ ಆಳವಾದ ಗಾಯಗಳಾಗಿವೆಯೆನೋ? ಧಡಂ ಧುಡುಂ ಸದ್ದು ಮಾಡಿ ಸಾಗುವ ಬಸ್ಸು. ಅದರ ಅಲ್ಲಾಡುವಿಕೆಯಲ್ಲಿ ಪಕ್ಕದ ರೂಪಾಳ ಭುಜ, ತೊಡೆ ಸ್ಪರ್ಶಗಳ ರೋಮಾಂಚನ. ಅಕ್ಕ ಕಿಟಕಿಗೆ ತಲೆ ಆನಿಸಿ ನಿದ್ದೆಗೆ ಜಾರಿದ್ದಳು. ರೂಪಾಳ ಮನಸ್ಸು ಏನನ್ನೋ ಕಳಕೊಳ್ಳುತ್ತಿದ್ದೇನೆಂಬ ಭಾವ ಪ್ರಕಟಿಸುತ್ತಿತ್ತು. ಮುಖ ಬಾಡಿದ ಸವತಿಕಾಯಿ ಆಗಿತ್ತು. ನಿಪ್ಪಾಣಿ ಬಸ್ ನಿಲ್ದಾಣ ಬಂತು. ಎಲ್ಲರೂ ಇಳಿದೆವು. 'ಅರ್ಧ ಕಪ್ ಚಾ ಕುಡಿಯೋಣ? ಬಸ್ ಬರೋತನಕ?' ಕೇಳಿದ.

ಅವಳಿಗೆ ಯಾವುದರಲ್ಲೂ ರುಚಿಸುವ ಮನವಿರಲಿಲ್ಲ. 'ಬ್ಯಾಡಾ... ಬಸ್ ಇಷ್ಟರಾಗ ಬಂದೋತು...ಸುಳಕೋಡಕ ಬಸ್ ಭಾಳ ಕಮ್ಮಿ... ತಪ್ಪಿ ಬಿಟ್ಟೀತು...' ಕ್ಷೀಣ ದನಿಯಲ್ಲಿ ಅಂದಳು. ಬಸೂ ಇನ್ನಷ್ಟು ಕಾಲ ಆಕೆ ಸಂಗಡ ಕಳೆಯೋಣಂದರೆ ಅಷ್ಟರಲ್ಲಿ ಕಿಟಕಿಗಳಿಗೆ ತಾಡಪತ್ರಿ ಹೊದ್ದಿದ ದರಿದ್ರ ಮಹಾರಾಷ್ಟ್ರ ರಾಜ್ಯ ಸಾರಿಗೆ ಬಸ್ ಬಂತು. ಜನ ಅಷ್ಟು ಇರಲಿಲ್ಲ. ಕಿಟಕಿ ಬಳಿಯೆ ಜಾಗ ದೊರೆಯಿತು. ರೂಪಾ ಅಕ್ಕ, ಬಸೂನತ್ತ ನೋಡುತ್ತ, 'ಮಾಮಾ... ಅಕ್ಕಾ... ಮತ್ತ ಬರತ್ಯಾನ... ನೀವೂ ಒಮ್ಮಿ ಬರ್ರಿ... ಅವ್ವ ನಿಮ್ಮನ್ನ ಕೇಳತಿರತಾರ...' ದನಿ ಬಿಗಿದಿತ್ತು. ಒಳಗೊಳಗೆ ರೋದನೆಯ ಕಂಪನ. ಬಿಟ್ಟಗಲುವ ಯಾತನೆಯ ಭಾವವೋ! ಗೊತ್ತಿಲ್ಲ!

ಬಸ್ಸು ಹೊರಟಿತು. ನಿಧಾನವಾಗಿ ಆಕೆಗೆ ಬಸೂ ಮತ್ತು ಬಸೂನ ಅಕ್ಕ ದೂರ ದೂರ ಸರಿದು ಹೋದಂತೆ ಎದೆಯಲ್ಲಿ ತಳಮಳ. ಏನನ್ನೋ ಕಳಕೊಳ್ಳುತ್ತಿದ್ದೇನೆ ಎಂಬ ಭಾವನೆ. ಹೆಪ್ಪುಗಟ್ಟಿದ ಹಿಮಗಡ್ಡೆಯ ಭಾರವಾದ ಹೃದಯ. ಹೊಟ್ಟೆಯಲ್ಲಿ ತೊಳಸಿದ ಅನುಭವ. ಉಮ್ಮಳಿಸಿ ಬಂದ ದುಃಖದ ಕಟ್ಟೆ ಒಡೆಯಿತು. ಮೌನವಾಗಿ ಕರ್ಚೀಪು ಮುಖಕ್ಕೆ ಹಿಡಿದು ರೋದಿಸಿದಳು. ಮನಸಾರೆ ಅತ್ತಳು.

* * *

ಮೊಬೈಲ್ ಖಣಖಣಿಸಿತು. ವಾಟ್ಸಾಪ್ ಸಂದೇಶ. ತೆಗೆದರೆ ರೂಪಾಳ ಮೆಸೆಜು. 'ಯುಗಾದಿ ಹಬ್ಬಕ್ಕೆ ಊರಿಗೆ ಬರತಾ ಇದೀನಿ. ನೀನೂ ಬಂದರೆ ಭೇಟಿ ಆಗೋಣ...' ಎಂದಿತ್ತು. ಹೌದು. ಫೋನ್ ನಲ್ಲಿ ಮನಸ್ಸು ಬಿಚ್ಚಿ ಮಾತನಾಡಲು ಸಾಧ್ಯವಿಲ್ಲ. ಆಕೆಯ ಎಲ್ಲ ಸವಾಲುಗಳಿಗೆ ಜವಾಬುಗಳನ್ನು ಎದುರಾ ಬದುರು ಕುಳಿತು ಕೊಡುವುದು ಒಳಿತು ಎಂದು ಬಸೂ ಭಾವಿಸಿದ. ಆತ ಆಕೆಯಿಂದ ಉದ್ಭವಿಸುವ ಕೆಲವು ಮುಖ್ಯ ಪ್ರಶ್ನೆಗಳನ್ನು ಗ್ರಹಿಸಿದ್ದ ಕೂಡ. ಬಸೂನಲ್ಲಿ ಉತ್ತರಗಳು ಸಿದ್ಧವಿದ್ದವು. ನಿತ್ಯ ಸೂರ್ಯ ಉದಯಿಸುವಂತೆ ಆಕೆಯ ಒಲವು ಸಹ ನಿತ್ಯದ ನಿಸರ್ಗ ಸತ್ಯದಷ್ಟೇ ನಿಖರವು.

ಅವತ್ತು ಯುಗಾದಿ ಹಬ್ಬದ ದಿನ. ಸುಡು ಬಿಸಿಲಿನ ಝಳ. ಜಾಲಿ ಮರಗಳ ಝುಂಡಿತ್ತು. ಆ ಮರಗಳಲ್ಲಿ ಕರ್‍ರನೆ ಕಿರುಚುವ ಕೀಟಗಳ ಸದ್ದು. ಬೇಸಿಗೆಯ ಕಾಲವನ್ನು ಸಾಬೀತು ಪಡಿಸಲೆಂದೇ ಜಾಲಿ ಮರದ ಕೀಟಗಳು ಹಟ ಹಿಡಿದು ಕಿರುಚುತ್ತಿದ್ದವು. ಸ್ವಲ್ಪ ಮುಂದಕ್ಕೆ ಹೆಜ್ಜೆ ಹಾಕಿದರೆ ಕಲ್ಯಾಣ ಬಾಗಾ ಎಂಬ ಮಾವಿನ ತೋಪು. ತಂಪಾದ ಮಾವಿನ ತೋಪಿನ ಮರವೊಂದರ ಕೆಳಗೆ ನಮ್ಮ ಭೇಟಿ.

ರೂಪಾ ಬಂದಳು. ಬಿಸಿಲಿನ ಕಾವಿಗೆ ಮುಖ